ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಎನ್‌ಕ್ರೋಚ್‌ಮೆಂಟ್ ಬಗ್ಗೆ ಕೃಷ್ಣಮೂರ್ತಿಗಳು ಪ್ರಸ್ತಾಪಿಸಿದರು. ಎನ್‌ಕ್ರೋಚ್‌ಮೆಂಟ್ ಬಗ್ಗೆ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಡೈರೆಕ್ಷನ್ ಕೊಟ್ಟಿದ್ದಾರೆ ಮೊದಲು ಸರ್ವೆ ಕಾರ್ಯ ಮಾಡಿ ಮುಗಿದ ಮೇಲೆಯೇ ಕೆರೆ ಹೂಳೆತ್ತುವ ಕೆಲಸ ಮಾಡಬೇಕೆಂದು. ಈಗಾಗಲೇ ಹೋಬಳಿಗೊಂದು ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ, ಅದು ಎನ್‌ಕ್ರೋಚ್‌ಮೆಂಟಿರಬಹುದು ಸಮಗ್ರ ಅಭಿವೃದ್ಧಿ ಇರಬಹುದು. ಎಲ್ಲಾ ನಿಟ್ಟಿನಲ್ಲೂ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಹಬ್ಬಿ ಜಲಪಾತದಿಂದ ನೀರು ಒದಗಿಸುವ ಯೋಜನೆ.

257(2207) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಬ್ಬಿ ಜಲಪಾತದಿಂದ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಬೀರೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮದಗದ ಕೆರೆ ಮತ್ತು ಹಿರಿಯೂರು ವಾಣಿವಿಲಾಸ (ಮಾರಿ ಕಣಿವೆ) ಸಾಗರಕ್ಕೆ ನೀರು ಒದಗಿಸುವ ಯೋಜನೆ ಸರ್ಕಾರದ ಮುಂದೆ ಇದೆಯೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಯಾವುದಾದರೂ ಸಮೀಕ್ಷೆ ನಡೆಸಲಾಗಿದೆಯೆ; ನಡೆಸಿದ್ದರೆ ಸಮೀಕ್ಷೆ ವರದಿ ಸರ್ಕಾರದ ಕೈ ಸೇರಿದೆಯೇ ಸೇರಿದ್ದಲ್ಲಿ, ಸದರಿ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

1) ಹಬ್ಬಿ ಜಲಪಾತದಿಂದ ಮದಗದ ಕೆರೆಗೆ ನೀರು ಒದಗಿಸುವ ಪ್ರಸ್ತಾಪ ತನಿಖೆಯಲ್ಲಿದೆ.

2) ಭದ್ರಾ ಜಲಾಶಯದಿಂದ ವಾಣಿವಿಲಾಸ ಸಾಗರಕ್ಕೆ ನೀರು ಒದಗಿಸುವ ಪ್ರಸ್ತಾಪ ತನಿಖೆಯಲ್ಲಿದೆ.

ಅ) ಹಬ್ಬಿ ಜಲಪಾತ-ಮದಗದಕೆರೆ ಲಿಂಕ್ ಕಾಲುವೆಗಾಗಿ ಈಗ ಟೋಪೋಷೀಟ್ ಆಧಾರಿತ ಅಧ್ಯಯನ ಮಾಡಲಾಗುತ್ತಿದೆ. ಭದ್ರಾ ಜಲಾಶಯ- ವಾಣಿವಿಲಾಸ ಸಾಗರ ಲಿಂಕ್ ಕಾಲುವೆಗಾಗಿ ಸವಿವರ ಸರ್ವೆ ಮತ್ತು ತನಿಖಾ ಕಾರ್ಯಗಳು ಪ್ರಗತಿಯಲ್ಲಿವೆ. ಯೋಜನಾ ವರದಿಗಳನ್ನು ತಯಾರಿಸಿ ಅವುಗಳಿಗೆ ತಾಂತ್ರಿಕ ಸಲಹಾ ಸಮಿತಿಯಿಂದ ಅನುಮೋದನೆಯನ್ನು ಪಡೆದ ನಂತರ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಕಾಮಗಾರಿಗಳನ್ನು ಆರಂಭಿಸಲಾಗುವುದು.

ಅಧ್ಯಕ್ಷರು :— ಪಾಟೀಲರೇ, ನಿಮ್ಮ ಅಧಿಕಾರಿಗಳಿಗೆ ಹೇಳಿ, ಬೇಗನೆ ನಮಗೆ ಉತ್ತರ ತಂದುಕೊಡಬೇಕು. ಇವತ್ತು ಬೆಳಿಗ್ಗೆ ತಂದುಕೊಟ್ಟರೆ ಹೇಗೆ?

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಅಧ್ಯಕ್ಷರೇ, ಚಿಕ್ಕಮಗಳೂರು ಕಿಮ್ಮಣ್ಣುಗುಂಡಿ ಎಂಬಲ್ಲಿ ಈ ಹಬ್ಬಿ ಜಲಪಾತ ಹುಟ್ಟುವುದು. ಮಳೆಗಾಲದಲ್ಲಿ ಹೆಚ್ಚೂಕಡಿಮೆ 2 ಟಿಎಂಸಿ ನೀರು ಲಭ್ಯವಾಗುತ್ತದೆಂಬುದು ತನಿಖೆಯಿಂದ ಸಚಿವರ ಗಮನಕ್ಕೆ ಬಂದಿರಬಹುದು. ಕಡೂರು ತಾಲ್ಲೂಕಿನಲ್ಲಿ ನಾವು 20 ವರ್ಷಗಳಿಂದ ಆಕಾಶ ನೋಡಿ ನೋಡಿ ಕಣ್ಣು ಕುರುಡಾಗಿದೆ. ನಮಗೆ ಮಾಡಿಕೆ ಮಳೆ ಅಥವಾ ಪ್ರಮಾಣದ ಮಳೆ ಆಗಲಿ ಬರುತ್ತಿಲ್ಲ. ಇವತ್ತು ಬಡತನ ನಮ್ಮನ್ನು ಎಷ್ಟು ಕಿತ್ತು ತಿನ್ನುತ್ತಿದೆ ಅಂದರೆ ನೂರಕ್ಕೆ 70ರಷ್ಟು ಜನ ಕಾಫಿ ತೋಟಗಳಿಗೆ ವಲಸೆ ಹೋಗುತ್ತಿದ್ದಾರೆ. ಕಾಫಿತೋಟದವರೂ ನಮ್ಮನ್ನು ಕೂಲಿಗೆ ತೆಗೆದುಕೊಳ್ಳುತ್ತಿಲ್ಲ ಏಕೆಂದರೆ ಕಾಫಿ ಬೆಲೆ ಕೂಡ ಕಡಿಮೆಯಾಗಿದೆ. ಸಚಿವರು ಇದಕ್ಕೇನು ಉತ್ತರ ಕೊಟ್ಟಿದ್ದಾರೆ ಇದು ನಮಗೆ ತೃಪ್ತಿಯಾಗಿಲ್ಲ. ಇದು ಮೂರನೇ ಸಾರಿ ನಾವು ಕೇಳುತ್ತಿರುವುದು. ತನಿಖೆಯಾಗುತ್ತಿದೆ ಸರ್ವೆ ಆಗುತ್ತಿದೆ ಎಂಬ ಉತ್ತರವೇ ಬರುತ್ತಿದೆಯೇ ಹೊರತು, ಬೇರೆ ಏನೂ ಆಗಿಲ್ಲ. ಈಗಾಗಲೇ ಡಬ್ಲ್ಯುಡಿಆರ್‌ಡಿಎಸ್‌ಗೆ 5 ಲಕ್ಷ ರೂ. ಕೊಟ್ಟಿದ್ದಾರೆ. ತನಿಖೆ ಯಾವ ಮಟ್ಟದಲ್ಲಿದೆ ಎಂಬುದನ್ನು ಸಚಿವರನ್ನು ಕೇಳಬಯಸುತ್ತೇನೆ. ಎರಡನೆಯದಾಗಿ ನಾವು ಯಾವುದೇ ಟಾನೆಲ್ ಅಲ್ಲಿ ಮಾಡಬೇಕಾಗಿಲ್ಲ. 6 ಕಿ.ಮೀ. ಮಾತ್ರ ಟನೆಲ್ ಮಾಡಿ ಕೊಳವೆ ಮೂಲಕ ನೀರು ಹರಿಸಿದರೆ ಅದು ಮಾರಿಕಣಿವೆ ಮೂಲಕ ಜಗಳೂರು ಹಾಗೂ ಚಳ್ಳಕೆರೆ ತಾಲ್ಲೂಕುಗಳಿಗೆ ಕುಡಿಯುವ ನೀರು ಮತ್ತು ಕೆರೆಗಳನ್ನು ತುಂಬುವ ಕೆಲಸ ಮಾಡಬಹುದು. ನೀರಾವರಿ ಆಗದೇ ಇದ್ದರೂ ಕೂಡ ಇವತ್ತೇನು ಮಳೆಯಿಂದ ತುಂಬುವ ಕೆರೆಗಳಿವೆ ಆ ಕೆಲಸ ಮಾಡಿಕೊಳ್ಳಬಹುದು. ಡಬ್ಲ್ಯುಆರ್ ಡಿಎಸ್ ನಡಿ ವಿಚಾರ ಮಾಡಲಾಗಿದೆ, 120 ಕೋಟಿ ರೂ. ಖರ್ಚಾಗಬಹುದೆಂದು ಸಚಿವರು ಹೇಳಿದ್ದಾರೆ. ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ಇಷ್ಟೇನೇ. ಈ ವರ್ಷದ ಬಜೆಟ್‌ನಲ್ಲಿ ಹಣ ಒದಗಿಸಿ ಕಾಮಗಳನ್ನು ಪ್ರಾರಂಭಿಸಬೇಕು.

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :— ಅಧ್ಯಕ್ಷರೇ ಕಳೆದ ಸದನದಲ್ಲಿ ಶ್ರೀ ಮಲ್ಲಿಕಾರ್ಜುನ ಈ ಪ್ರಶ್ನೆ ಕೇಳಿದಾಗ ಸರ್ವೆ ಕಾರ್ಯ ಕೈಗೆತ್ತಿಗೊಳ್ಳುವುದಾಗಿ ಹೇಳಿದ್ದೆವು. ಈಗಾಗಲೇ ಈ ಯೋಜನೆ ಅಧ್ಯಯನ ಮಾಡಿ ಯೋಜನಾ ವರದಿ ಸಿದ್ಧಪಡಿಸುತ್ತಿದ್ದಾರೆ. ಇಷ್ಟರಲ್ಲೇ ಅದು ಸರ್ಕಾರಕ್ಕೆ ಸಲ್ಲಲಿದೆ. ಹಾಗೇನೇ ಭದ್ರಾ ಜಲಾಶಯ ಹಾಗೂ ವಾಣಿವಿಲಾಸ ಸಾಗರ ಲಿಂಕ್ ಬಗ್ಗೆ ಕೇಳಿದ್ದಾರೆ. ಇದರ ವಿವರವಾದ ಸರ್ವೆ ಕೆಲಸ ಕೊನೇ ಹಂತದಲ್ಲಿದೆ ಬಹುಶಃ ಸೆಪ್ಟೆಂಬರ್ ಒಳಗಾಗಿ ಸರ್ವೆ ಮುಗಿಸಿ, ವಿವರವಾದ ಪ್ರಾಜೆಕ್ಟ್ ವರದಿ ತಯಾರಿಸಿ ಟೆಕ್ನಿಕಲ್ ಕಮಿಟಿ ಮುಂದೆ ಅಕ್ಟೋಬರ್ ವೇಳೆಗೆ ಬರುವುದು. ಸುಮಾರು ಡಿಸೆಂಬರ್ ಹೊತ್ತಿಗೆ ಅಂತಿಮವಾದ ಆಡಳಿತಾತ್ಮಕ ಮಂಜೂರಾತಿ ನೀಡಿ ಕೆಲಸವನ್ನು ತೆಗೆದುಕೊಳ್ಳಬಹುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಏನಾದರೂ ಆ ಕಾರ್ಯಕ್ರಮ ಅನುಷ್ಠಾನ ಮಾಡಿಸಿದರೆ ಚಿಕ್ಕಮಗಳೂರು ಜಿಲ್ಲೆಯ ಅತ್ಯಂತ ದೊಡ್ಡ ಕೆರೆ ಮದಗ ಕೆರೆಯನ್ನು ಮೊದಲಿಗೆ ಭಾರಿ ನೀರಾವರಿ ಇಲಾಖೆಗೆ ಸೇರಿಸಿಕೊಂಡರೆ, ಇವತ್ತೇನು ವಾಣಿವಿಲಾಸ ಸಾಗರಕ್ಕೆ ಮದಗ ಮತ್ತು ಐಲು ಕೆರೆಯಿಂದ ನೀರು ಹೋಗುತ್ತಿದೆ, ಈಗಾಗಲೇ ಮದಗಾ ಮತ್ತು ಐಲು ಕೆರೆಯಿಂದ ನಾಲ್ಕೈದು ಸಾವಿರ ಹೆಕ್ಟೇರ್ ನೀರು ಕೊಡಲಾಗುತ್ತಿದೆ ಅಲ್ಲಿಗೆ ಈ ಹಬ್ಬೆ ಫಾಲ್ಸ್ ನೀರನ್ನೂ ಕೊಟ್ಟರೆ ಕನಿಷ್ಠ 20 ರಿಂದ 25 ಸಾವಿರ ಹೆಕ್ಟೇರ್‌ಗೆ ನೀರು ಸಿಗುತ್ತದೆ. ಇದು ಮುಖ್ಯಮಂತ್ರಿಗಳ ಮತ್ತು ಭಾರೀ ನೀರಾವರಿ ಸಚಿವರ ಗಮನಕ್ಕೆ ತಂದಿದ್ದೇನೆ.

ಶ್ರೀ ಎಚ್.ಕೆ. ಪಾಟೀಲ್ :— ಮದಗದ ಕೆರೆ ನೀರನ್ನು ಹೆಚ್ಚುವರಿಯಾಗಿ ಶೇಖರಿಸಬೇಕೆನ್ನುವುದಕ್ಕೇ ಈ ಅಧ್ಯಯನ ಪ್ರಾರಂಭವಾಗಿರುವುದು. ಮದಗದ ಕೆರೆಗೆ ಹೆಚ್ಚಿನ ನೀರು ಹರಿದುಬರುವ ಹಾಗೆ ಎಲ್ಲಾ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುವುದು.

ತರೀಕೆರೆ ತಾಲ್ಲೂಕಿನ ಗ್ರಾಮಗಳಿಗೆ ಹಬ್ಬೆ ಫಾಲ್ಸ್‌ನಿಂದ ನೀರು ಒದಗಿಸುವುದು.

258(2616) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತರೀಕೆರೆ ತಾಲ್ಲೂಕಿನ ಅಮೃತಪುರ ಹೋಬಳಿಯ ಕೆಲವು ಗ್ರಾಮಗಳ ಜಮೀನಿಗೆ ಹಬ್ಬೆ ಫಾಲ್ಸ್‌ನಿಂದ ನೀರನ್ನು ಒದಗಿಸುವ ಸಲುವಾಗಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಯೋಜನೆಯ ರೂಪುರೇಷೆಗಳೇನು.

ಇ) ಅಂದಾಜು ಮತ್ತು ನಕ್ಷೆಯನ್ನು ಸಿದ್ಧಪಡಿಸಲಾಗಿದೆಯೇ? (ವಿವರ ಒದಗಿಸುವುದು)

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :— ಅಧ್ಯಕ್ಷರೇ ಮಾನ್ಯ ಸದಸ್ಯರಿಗೆ ಉತ್ತರದಲ್ಲಿ ತಿಳಿಸಲಾಗಿದೆ ತರೀಕೆರೆ ತಾಲ್ಲೂಕು ಅಮೃತೂರು ಹೋಬಳಿ ಹಾಗೂ ಕೆಲವು ಗ್ರಾಮಗಳಿಗೆ ಹಬ್ಬೆ ಫಾಲ್ಸ್‌ನಿಂದ ನೀರನ್ನೊದಗಿಸುವ ಸಲುವಾಗಿ ಯೋಜನೆ ಇನ್ನೂ ಸಿದ್ಧವಾಗಿಲ್ಲ, ಆದ್ದರಿಂದ ಇತರೆ ಪ್ರದೇಶಗಳು ಉದ್ಭವಿಸುವುದಿಲ್ಲ.